ಕರಮಚಂದ ಯಾವುದೋ ಗಾಢ ಆಲೋಚನೆಗೆ ಬಿದ್ದ. ನಾನು ಕಾರನ್ನು ಕಾಲೇಜು ರಸ್ತೆಯತ್ತ ಚಲಾಯಿಸಿದೆ.

ಆ ಸಂಜೆ ಡಿಸೋಜ ಬಂದವನು ಹೊಸದೊಂದು ಸುದ್ದಿ ತಿಳಿಸಿದ. ಆ ಫೋಟೊದಲ್ಲಿರುವ ಮುದುಕ ಪತ್ತೆಯಾಗಿದ್ದಾನಂತೆ! ಅವ್ನು ರಚನ್ ಕಾಲೇಜಿನಲ್ಲಿ ಅನುಚಿತವಾಗಿ ವ್ಯವಹರಿಸಿದ್ದ ಮಹಿಳೆಯ ಮಾವ!! ಆ ಮಹಿಳೆಯ ಗಂಡ ಕೂಡಾ ನಾಪತ್ತೆಯಾಗಿದ್ದಾನೆ! ಹಾಗಾಗಿ ರಚನ್ ಕಾಣೆಯಾಗಿದ್ದರಲ್ಲಿ ಅವ್ನ ಕೈವಾಡ ಇರಬೇಕೆನ್ನುವುದು ಡಿಸೋಜನ ತರ್ಕ. ಘಟನೆಗೆ ಇನ್ನೊಂದು ತಿರುವು ಸಿಕ್ಕಿತ್ತು!!

ರಾತ್ರಿ ನಾವು ಊಟದ ತಯಾರಿಯಲ್ಲಿರುವಾಗ ಕರೆಗಂಟೆ ಸದ್ದು ಮಾಡಿತು. ಕದ ತೆರೆದಾಗ ನಿಂತಿದ್ದಾಕೆ ಸುಭಾಷಿಣಿ. ಆಕೆಯ ಮೋರೆಯಲ್ಲಿ ಗಾಬರಿ ನಿಚ್ಚಳವಾಗಿತ್ತು.

"ಸಾರ್. ನಾನು ರಚನ್‌ರನ್ನು ಕಂಡೆ!" ಏರುದನಿಯಲ್ಲಿ ಹೇಳಿ, ಉಸಿರು ಹೊರಹಾಕಿದಳು.

"ಎಲ್ಲಿ? ಎಲ್ಲಿಗೆ ಹೋಗಿದ್ದರಂತೆ?" ನಾನು ಕೇಳಿದೆ.

"ನನ್ಗೆ ಮಾತಾಡಲು ಸಿಕ್ಲಿಲ್ಲ! ನಾನು ಮಾರುಕಟ್ಟೆಯಿಂದ ಮನೆಗೆ ನಡೆದುಕೊಂಡು ಬರುತ್ತಿದ್ದೆ. ಕಾವೇರಿ ಕಲ್ಯಾಣ ಮಂಟಪ ದಾಟಿ ಬರುವಾಗ ರಸ್ತೆ ಸ್ವಲ್ಪ ನಿರ್ಜನವಾಗಿತ್ತು. ಆಗ ಕಾರೊಂದು ಬಂದು ತುಸು ದೂರದಲ್ಲಿ ನಿಂತಿತು. ಅದರಿಂದ ಮೂವರು ಇಳಿದ್ರು. ಕಾರು ತಕ್ಷಣ ಮುಂದಕ್ಕೋಡಿತು. ಇಬ್ಬರು ಒಬ್ಬ ವ್ಯಕ್ತಿಯನ್ನು ಹಿಡಿದುಕೊಂಡಿದ್ದರು. ಬೀದಿ ದೀಪಗಳ ಮಂದ ಬೆಳಕಲ್ಲಿ ನಾನು ಆ ಮನುಷ್ಯನನ್ನು ಗುರುತಿಸಿದೆ. ಅವರು ರಚನ್ ಅನ್ನೋದ್ರಲ್ಲಿ ಸಂಶಯವೇ ಇಲ್ಲ!"

"ರಚನ್ ಎಲ್ಲಿ ಹೋದ್ರು?"

"ಅವರಿಬ್ಬರೂ ರಚನ್‌ರನ್ನು ಎಳೆದುಕೊಂಡು ಪಕ್ಕದಲ್ಲಿದ್ದ ಪಾಳು ಕಟ್ಟಡದತ್ತ ಹೋದರು. ರಚನ್ ಪ್ರಯಾಸದಿಂದ ಕಾಲು ಎಳೆದು ಹಾಕುತ್ತಿದ್ದರು. ಪ್ರಾಯಶಃ ಅವರ ಕಾಲಿಗೆ ಏಟು ಬಿದ್ದಿರಬೇಕು. ಒಮ್ಮೆಗೇ ಅವರು ವಯಸ್ಸಾದವರಂತೆ ಕಾಣುತ್ತಿದ್ದರು. ಪಾಪಿಗಳು! ಅವ್ರಿಗೆ ಏನೋ ಮಾಡಿರಬೇಕು... ನನ್ಗೆ ಗಾಬರಿ ಮತ್ತು ಭಯದಲ್ಲಿ ದನಿಯೇ ಬರಲಿಲ್ಲ. ಏನು ಮಾಡುವುದೆಂದು ಒಮ್ಮೆಗೆ ತೋಚಲಿಲ್ಲ. ನಂತ್ರ ಸಾವರಿಸಿಕೊಂಡು, ಧಾವಿಸಿ ಬರುವಷ್ಟರಲ್ಲಿ ಅವರು ಪಾಳು ಕಟ್ಟಡದ ಕಾಂಪೌಂಡ್ ಒಳಗೆ ಕತ್ತಲಲ್ಲಿ ಕಾಣೆಯಾಗಿದ್ರು. ನಾನಲ್ಲಿ ತುಸು ಹೊತ್ತು ಕಾದಿದ್ದೆ. ಒಳಗೆ ಹೋಗಲು ಭಯವಾಯಿತು..."

"ಅವರು ನಿಮ್ಮಿಂದ ಎಷ್ಟು ದೂರದಲ್ಲಿ ಇದ್ದರು? ನಿಮ್ಮನ್ನು ರಚನ್ ನೋಡಲಿಲ್ವೆ?" ಕರಮಚಂದ ವಿಚಾರಿಸಿದ.

"ಕೆಲವೇ ಗಜಗಳ ದೂರದಲ್ಲಿ... ನೋಡಿ. ಆ ದೀಪದ ಕಂಬ ಕಾಣುತ್ತದಲ್ಲ, ಅಷ್ಟು ದೂರದಲ್ಲಿದ್ದರು. ಆದ್ರೆ ರಚನ್ ನನ್ನನ್ನು ನೋಡೋ ಸಾಧ್ಯತೆಯಿಲ್ಲ ಯಾಕಂದ್ರೆ ಅವರು ರಸ್ತೆಯ ಆಚೆ ಬದಿಗಿದ್ದರು. ಮತ್ತು ಅವರು ಬಹಳ ಬಳಲಿದಂತಿದ್ದರು."

"ಬಳಲಿದಂತೆ! ನೀವು ಕತ್ತಲಲ್ಲಿ ಹೇಗೆ ಗಮನಿಸಿದಿರಿ?"

"ಅವರ ಕಾರು ಆ ಪಾಳು ಕಟ್ಟಡದ ಗೇಟಿನಿಂದ ತುಸು ಆಚೆ ನಿಂತಿತ್ತು. ಅದರಿಂದಿಳಿದು, ಅವರು ರಚನ್‌ನನ್ನು ಹಿಡಿದುಕೊಂಡು ಗೇಟಿನತ್ತ ಬರುವಾಗ, ವಾಹನವೊಂದು ಹಾದು ಹೋದದ್ದರಿಂದ ಅದರ ಬೆಳಕಲ್ಲಿ ರಚನ್ ಸ್ಪುಟವಾಗಿ ಕಂಡರು. ಬಳಲಿಕೆಯಿಂದಾಗಿಯೇ ಅವರು ಒಮ್ಮೆಗೇ ವಯಸ್ಸಾದವರಂತೆ ಗೋಚರಿಸಿರಬೇಕು. ಆ ಇಬ್ಬರ ಹೆಗಲ ಮೇಲೆ